**<u>ಹಿರಿಯ  ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ,</u>**

**<u>ನಂಜನಗೂಡು.</u>**

**<u>ಸಿ.ಸಿ.ನಂ.1227/2022</u>**

ಫಿರ್ಯಾದುದಾರರುಃ ನಂಜನಗೂಡು ಪಟ್ಟಣ ಪೊಲೀಸ್ ಠಾಣೆ

ವಿರುದ್ಧ

ಆರೋಪಿತರುಃ ಕಪಿಲೇಶ್ ಮತ್ತು ಇತರರು

## <u>ದೋಷಾರೋಪಣೆ</u>

ನಂಜನಗೂಡಿನ ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಶ್ರೀಮತಿ ಬಿ.ಅನುಪಮಲಕ್ಷ್ಮಿ ಬಿ.ಎ., ಎಲ್.ಎಲ್.ಬಿ., ಆದ ನಾನು ಈ ಕೆಳಕಂಡ ಆರೋಪಿತರಾದ,

1. ಕಪಿಲೇಶ್ ಇ.ಆರ್.
   ಬಿನ್ ಲೇಟ್ ಇ.ಆರ್.ಶಂಕರ್,
   42 ವರ್ಷ,
   ವಾಸಃ ನಂ.1250,
   ಪಾಠಶಾಲಾ ಬೀದಿ ,
   ನಂಜನಗೂಡು ಟೌನ್,
   ಮೈಸೂರು ಜಿಲ್ಲೆ.

2. ರಾಘವೇಂದ್ರ ಎಂ. ಬಿನ್ ಎ. ಮಹದೇವ,
   37 ವರ್ಷ,
   ವಾಸಃ ಚಿತ್ರಮಂದಿರದ ಹಿಂಭಾಗ,
   ನರಸಣ್ಣನ ಅಗ್ರಹಾರ,
   ನಂಜನಗೂಡು ಟೌನ್,
   ಮೈಸೂರು ಜಿಲ್ಲೆ.

3. ಉಮೇಶ ಬಿನ್ ಲೇಟ್ ಮಹದೇವಶೆಟ್ಟಿ,
   32 ವರ್ಷ,

ವಾಸಃ ನಂ.522/2, ವಕ್ಕಲಗೇರಿ,
ನಂಜನಗೂಡು ಟೌನ್,
ಮೈಸೂರು ಜಿಲ್ಲೆ.

ನಿಮ್ಮ ಮೇಲೆ ಹೊರಿಸುವ ದೋಷಾರೋಪಣೆ ಏನೆಂದರೆ,

ದಿನಾಂಕ 30-12-2021 ರಂದು ಮಧ್ಯಾಹ್ನ 2-30 ರ ಸಮಯದಲ್ಲಿ ನಂಜನಗೂಡು ಪಟ್ಟಣ ಪೊಲೀಸ್ ಠಾಣಾ ಸರಹದ್ದು, ನಾಗಮ್ಮ ಶಾಲೆಯ ಬಳಿ ಬಾಲಕಿಯ ಸರ್ಕಾರಿ ಪದವಿ ಪೂರ್ವ ಕಾಲೇಜಿನ ಆವರಣದಲ್ಲಿ ಮಾನ್ಯ ಶಾಸಕರ ಬಳಿ ಸಾಕ್ಷಿ-1 ರವರು ತಮ್ಮ ಗ್ರಾಮದ ಕುಂದುಕೊರತೆಗಳ ಬಗ್ಗೆ ಮಾತನಾಡಲು ಹೋಗಿದ್ದಾಗ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಬೋಳಿಮಗನೇ, ಸೂಳೆಮಗನೇ ಎಂದು ಅವಾಚ್ಯ ಶಬ್ದಗಳಿಂದ ನಿಂದಿಸಿ ಅಪಮಾನಗೊಳಿಸಿ, ಭಾರತೀಯ ದಂಡ ಸಂಹಿತೆ ಕಲಂ 504 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಎರಡನೆಯದಾಗಿ, ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 1 ನೇ ಆರೋಪಿ ಕೈಗಳಿಂದ ಸಾಕ್ಷಿ-1 ರವರ ಕುತ್ತಿಗೆಗೆ, ಮೈಕೈಗೆ ಹೊಡೆದು, 2 ನೇ ಆರೋಪಿ ಕೈಗಳಿಂದ ತಲೆಗೆ ಹೊಡೆದು ಕಾಲಿನಿಂದ ಮೈಕೈಗೆ ಒದ್ದು ಸಾಮಾನ್ಯ ಸ್ವರೂಪದ ಗಾಯವುಂಟು ಮಾಡಿ, ಭಾರತೀಯ ದಂಡ ಸಂಹಿತೆ ಕಲಂ 323 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಮೂರನೆಯದಾಗಿ, ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ನಿಮ್ಮ ಪೈಕಿ 3 ನೇ ಆರೋಪಿ ಸಾಕ್ಷಿ-1 ರವರ ಕತ್ತಿನಪಟ್ಟಿಯನ್ನು ಹಿಡಿದು ತಳ್ಳಿ ಅಕ್ರಮವಾಗಿ ತಡೆದು ಭಾರತೀಯ ದಂಡ ಸಂಹಿತೆ ಕಲಂ 341 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಕೊನೆಯದಾಗಿ, ಸದರಿ ದಿನಾಂಕ, ಸಮಯ ಮತ್ತು ಸ್ಥಳದಲ್ಲಿ, ಆರೋಪಿತರಾದ ನೀವು ಸಮಾನ ಉದ್ದೇಶದಿಂದ, ಸಾಕ್ಷಿ-1 ರವರಿಗೆ ಇನ್ನೊಂದು ಸಲ ನಮ್ಮ ತಂಟೆಗೆ ಬಂದರೆ ನಿನ್ನನ್ನು ಮುಗಿಸದೇ ಬಿಡುವುದಿಲ್ಲ ಎಂದು ಕೊಲೆ ಬೆದರಿಕೆ ಹಾಕಿ ಭಾರತೀಯ ದಂಡ ಸಂಹಿತೆ ಕಲಂ 506 ಸಹವಾಚಕ ಕಲಂ 34 ರಡಿ ಶಿಕ್ಷಾರ್ಹ ಅಪರಾಧ ಎಸಗಿದ್ದು, ಸದರಿ ಅಪರಾಧವು ಈ ನ್ಯಾಯಾಲಯದ ಸಂಜ್ಞೆಗೆ ಬರುತ್ತದೆ.

ಈ ಮೇಲ್ಕಂಡ ಆರೋಪಗಳಡಿ ನೀವು ನನ್ನಿಂದ ಅಧಿವಿಚಾರಣೆಗೊಳಪಡುತ್ತೀರೆಂದು ಈ ಮೂಲಕ ನಿರ್ದೇಶಿಸುತ್ತೇನೆ.

ದಿನಾಂಕಃ 13.02.2023

(ಬಿ. ಅನುಪಮಲಕ್ಷ್ಮಿ)
ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ
ನ್ಯಾಯಿಕ ದಂಡಾಧಿಕಾರಿಗಳು, ನಂಜನಗೂಡು.